ಪುಟ ತೆರೆದಂತೆ...



ಬೃಹತ್ ಯೋಜನೆಗಳಿಗೆ ಕೇಂದ್ರ ಅಡ್ಡಗಾಲು

ಅಮ್ಮಾಜೇಶ್ವರಿ ಏತನೀರಾವರಿಗೆ ಸಿಎಂ ಚಾಲನೆ

ನಾಡುಕರುನಾಡು | 5



ಆಲೂಗಡ್ಡೆಯಂತೆ ಕಾಣಿಸಿದ್ದು ನಿಜಕ್ಕೂ ಆಲೂಗಡ್ಡೆಯಾ, ಬಾಂಬಾ?

ನೂರೆಂಟು ವಿಶ್ವ

ಸಂ.ಪುಟ | 6



ಘೋಷಣೆಯಲ್ಲೇ ಎಲ್ಲವೂ ಇದೆ...

ಬುಲೆಟ್ ಪ್ರೂಫ್

ಸಂ.ಗಮ | 7



ಬಂಗಾಳದೆಲ್ಲೆಡೆ ವ್ಯಾಪಿಸಲಿದೆ ಸಂದೇಶ್ ಖಾಲಿ ಬಿರುಗಾಳಿ

ಟಿಎಂಸಿ ವಿರುದ್ಧ ಮೋದಿ ತೀವ್ರ ವಾಗ್ದಾಳಿ

ದೇಶ | 9





2019ರ ಲೋಕಸಭೆ ಚುನಾವಣೆ ವೇಳೆ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದ ಎರಡು ಪ್ರಕರಣಗಳ ವಿಚಾರಣೆಗಾಗಿ ಮಾಜಿ ಸಂಸದೆ ಮತ್ತು ನಟಿ ಜಯಪ್ರದಾ ಅವರು ಬುಧವಾರ ವಿಶೇಷ ನ್ಯಾಯಾಲಯದ ಮುಂದೆ ಹಾಜರಾದರು.

# ವಿಶ್ವವಾಣಿ

ವಿಶ್ವಾಸವೇ ವಿಶ್ವ



ಪತಿಗೆ ತಕ್ಕ ಪತ್ನಿ ಅನ್ನಿಸಿಕೊಂಡಿದ್ದ ಲೀಲಾ ಕಾರಂತ

ಅವೆನ್ಯೂ ರೋಡ್

ಕಾರಂತರ ಸುಳಿಯಲ್ಲಿ


# ಲೋಕ ಅಖಾಡಕ್ಕೆ ರಾಜ್ಯದ ಕಲಿಗಳು

## ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಸಿಇಸಿ ಸಭೆ: 15ಕ್ಕೂ ಹೆಚ್ಚು ಕ್ಷೇತ್ರಗಳ ಪಟ್ಟಿ ಅಂತಿಮ | ದೆಹಲಿಗೆ ತೆರಳಲಿರುವ ಡಿಸಿಎಂ

## ಕೈನ ಸಭೆ ಇಂದು; ಮುಂದಿನ ವಾರದಲ್ಲಿ ಟಿಕೆಟ್ ಘೋಷಣೆ

ವಿಶ್ವವಾಣಿ ಸುದ್ದಿಮನೆ

**ಬೆಂಗಳೂರು:** ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ನಿಟ್ಟಿನಲ್ಲಿ ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿ(ಸಿಇಸಿ) ಸಭೆ ಗುರುವಾರ ನಡೆಯಲಿದೆ. ಸಭೆಯಲ್ಲಿ ರಾಜ್ಯದ ಟಿಕೆಟ್ ಪಟ್ಟಿ ಬಹುತೇಕ ಅಂತಿಮವಾಗಲಿದ್ದು, ಇನ್ನೊಂದು ವಾರದಲ್ಲಿ ಘೋಷಣೆಯಾಗುವುದು ನಿಶ್ಚಿತ ಎನ್ನಲಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ವರಿಷ್ಠ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಸಮಿತಿಯ ಸದಸ್ಯರು ಸಭೆಯಲ್ಲಿ ಇರಲಿದ್ದಾರೆ. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಲೋಕಸಭಾ ಟಿಕೆಟ್‌ಗೆ ಸಂಬಂಧಿಸಿದಂತೆ ಚರ್ಚೆ ನಡೆಯಲಿದೆ. ಗುರುವಾರ ಸಂಜೆ ಆರು ಗಂಟೆಗೆ ಸಭೆ ಆರಂಭವಾಗಲಿದ್ದು, ರಾಜ್ಯದ ಬಹುತೇಕ ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳನ್ನು ಅಖೈರು ಗೊಳಿಸುವುದು ನಿಶ್ಚಿತ ಎನ್ನುವ ಮಾತುಗಳು ಕೇಳಿಬಂದಿದೆ.

ಕರ್ನಾಟಕದಲ್ಲಿರುವ ಲೋಕಸಭಾ ಚುನಾವಣಾ ಚಿತ್ರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ವರಿಷ್ಠರಿಗೆ ವಿವರಿಸಲಿದ್ದಾರೆ. ಈಗಾಗಲೇ ಎಲ್ಲ ಲೋಕಸಭಾ ಕ್ಷೇತ್ರಗಳಿಂದ ವರದಿ ಪಡೆದುಕೊಂಡಿರುವ ರಾಜ್ಯ ಕಾಂಗ್ರೆಸ್, ಆಕಾಂಕ್ಷಿಗಳ ಪಟ್ಟಿಯನ್ನು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೇವಾಲ ಅವರಿಗೆ ರವಾನಿಸಿದ್ದಾರೆ. ಈ ವರದಿಯನ್ನು ಮುಂದಿಟ್ಟುಕೊಂಡು 28 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

**ಸಿಎಂ ಗೈರು:** ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಭಾಗವಹಿಸಬೇಕಿತ್ತು. ಆದರೆ ಬಸವಕಲ್ಯಾಣದ ಕಾರ್ಯಕ್ರಮವಿದ್ದು, ಸಂಜೆ ವಿಧಾನಸೌಧ ದಲ್ಲಿ ಚಲನ ಚಿತ್ರೋತ್ಸವದ ಸಮಾರೋಪವಿರುವುದರಿಂದ ಸಭೆಗೆ ಗೈರಾಗುತ್ತಿದ್ದಾರೆ. → 8

### ಹದಿನೆಂಟು ಕ್ಷೇತ್ರಗಳಲ್ಲಿ ಬಹುತೇಕ ಖಚಿತ

ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಎರಡು ಸುತ್ತಿನ ಮಾತುಕತೆ ನಡೆಸಿದ್ದು, 18 ಕ್ಷೇತ್ರಗಳಿಗೆ ಯಾವುದೇ ಗೊಂದಲವಿಲ್ಲದೇ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದೆ. ಈ ಎಲ್ಲ ಕ್ಷೇತ್ರಗಳಿಗೂ ಒಂದೇ ಹೆಸರನ್ನು ರವಾನಿಸಲಾಗಿದೆ. ಆದರೆ ಇನ್ನುಳಿದ 10 ಕ್ಷೇತ್ರಗಳಿಗೆ ಎರಡು, ಮೂರು ಆಕಾಂಕ್ಷಿಗಳ ಹೆಸರನ್ನು ರವಾನಿಸಲಾಗಿದೆ.

### ಸಂಭಾವ್ಯ ಅಭ್ಯರ್ಥಿಗಳು

| ಕ್ಷೇತ್ರ | ಅಭ್ಯರ್ಥಿ |
|---|---|
| ಬೆಂ.ಗ್ರಾಮಾಂತರ | ಡಿ.ಕೆ ಸುರೇಶ್ |
| ತುಮಕೂರು | ಮುದ್ದಹನುಮೇಗೌಡ |
| ಮಂಡ್ಯ | ಸ್ಟಾರ್ ಚಂದ್ರು |
| ಶಿವಮೊಗ್ಗ | ಗೀತಾ ಶಿವರಾಜಕುಮಾರ್ |
| ಚಿತ್ರದುರ್ಗ | ಚಂದ್ರಪ್ಪ |
| ಕಲಬುರಗಿ | ರಾಧಕೃಷ್ಣ |
| ಕೋಲಾರ | ಕೆ.ಎಚ್. ಮುನಿಯಪ್ಪ |
| ಬೀದರ್ | ರಾಜಶೇಖರ್ ಪಾಟೀಲ್ |
| ಚಿಕ್ಕಬಳ್ಳಾಪುರ | ರಕ್ಷಾ ರಾಮಯ್ಯ |
| ಮೈಸೂರು-ಕೊಡಗು | ಎಂ.ಲಕ್ಷ್ಮಣ್ |



ರಂಗೇರಿದ ರಾಜಕೀಯ

ವಿಶ್ವವಾಣಿ ವಿಶೇಷ

### ಖಚಿತವಾಗಿರುವ ಟಿಕೆಟ್

| ಕ್ಷೇತ್ರ | ಅಭ್ಯರ್ಥಿ |
|---|---|
| ಮೈಸೂರು-ಕೊಡಗು | ಪ್ರತಾಪ್ ಸಿಂಹ |
| ಬೆಂಗಳೂರು ದಕ್ಷಿಣ | ತೇಜಸ್ವಿಸೂರ್ಯ |
| ಶಿವಮೊಗ್ಗ | ಬಿ.ವೈ. ರಾಘವೇಂದ್ರ |
| ಹುಬ್ಬಳ್ಳಿ-ಧಾರವಾಡ | ಪ್ರಲ್ಹಾದ್ ಜೋಶಿ |
| ದಾವಣಗೆರೆ | ಜಿ.ಎಂ. ಸಿದ್ದೇಶ್ವರ್ |
| ಚಿಕ್ಕೋಡಿ | ಅಣ್ಣಾ ಸಾಹೇಬ್ ಜೊಲ್ಲೆ |
| ಉತ್ತರ ಕನ್ನಡ | ಅನಂತಕುಮಾರ್ ಹೆಗಡೆ |
| ಬಳ್ಳಾರಿ | ಶ್ರೀರಾಮುಲು |
| ಬೆಂಗಳೂರು ಕೇಂದ್ರ | ಪಿ.ಸಿ. ಮೋಹನ್ |

### ಪ್ರಮುಖಾಂಶ

- ಲೋಕಸಭೆಗೆ ಸ್ಪರ್ಧಿಸಲು ಸಚಿವರ ಮೇಲೆ ಒತ್ತಡವಿದ್ದರೂ, ಹಲವು ಸಚಿವರಿಗೆ ಆಸಕ್ತಿಯಿಲ್ಲ
- ಬೆಂಗಳೂರು ದಕ್ಷಿಣ ಸೇರಿದಂತೆ ಬಿಜೆಪಿ ಭದ್ರಕೋಟೆ ಯಲ್ಲಿ ಸ್ಪರ್ಧಿಸಲು ಅನೇಕರು ಹಿಂದೇಟು
- ಉಡುಪಿ-ಚಿಕ್ಕಮಗಳೂರಿನಿಂದ ಜಯಪ್ರಕಾಶ್ ಹೆಗ್ಡೆ ಸ್ಪರ್ಧೆಗೆ ಪಕ್ಷದಲ್ಲಿಯೇ ವ್ಯಕ್ತ ವಿರೋಧ
- ಮಲ್ಲಿಕಾರ್ಜುನ ಖರ್ಗೆ ಕಲಬುರಗಿಯಿಂದ ಸ್ಪರ್ಧಿಸಬೇಕೇ, ಬೇಡವೇ ಎಂಬುದು ತೀರ್ಮಾನ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಗುರುವಾರ ಸಭೆ ನಡೆಯಲಿದ್ದು, ಈ ವೇಳೆ ಕರ್ನಾಟಕ ಟಿಕೆಟ್ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಯಲಿದೆ. ಆ ಬಳಿಕ ಯಾರಿಗೆ ಟಿಕೆಟ್ ಸಿಗಲಿದೆ ಎನ್ನುವುದು ಸ್ಪಷ್ಟವಾಗಲಿದೆ.

– ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ದೆಹಲಿಯಲ್ಲಿ ನಡೆದ ಮಹತ್ವದ ಸಭೆಯಲ್ಲಿ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರೊಂದಿಗೆ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ವ್ಯಾಪಕ ಚರ್ಚೆ ನಡೆಸಲಾಗಿದೆ. ಶೀಘ್ರವೇ ರಾಜ್ಯದ ಅಭ್ಯರ್ಥಿಗಳ ಪಟ್ಟಿಯನ್ನು ಪಕ್ಷದ ವರಿಷ್ಠರು ಬಿಡುಗಡೆ ಮಾಡಲಿದ್ದಾರೆ.

– ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

### ಪ್ರಮುಖಾಂಶ

- ಬುಧವಾರದ ಸಭೆ ಬಳಿಕ ರಾಜ್ಯ ಅಭ್ಯರ್ಥಿಗಳ ಕುರಿತು ಮೋದಿ ಜತೆ ಚರ್ಚಿಸಲಿರುವ ನಡ್ಡಾ
- ಹಲವು ಹಾಲಿ ಸಂಸದರ ಪರವಾಗಿ ಬ್ಯಾಟ್ ಮಾಡಿರುವ ಮಾಜಿ ಸಿಎಂ ಯಡಿಯೂರಪ್ಪ
- ಲಿಂಗಾಯತ ಹಾಲಿ ಸಂಸದರಿಗೆ ಟಿಕೆಟ್ ನಿರಾಕರಣೆ ಬೇಡ ಎನ್ನುತ್ತಿರುವ ರಾಜ್ಯ ನಾಯಕರು
- ಜೆಡಿಎಸ್‌ಗೆ ಬಿಟ್ಟು ಕೊಡಬೇಕಾಗಿರುವ ಕ್ಷೇತ್ರಗಳ ಬಗ್ಗೆಯೂ ವರಿಷ್ಠರೊಂದಿಗೆ ನಡೆದ ಚರ್ಚೆ

## ದೆಹಲೀಲಿ ರಾಜ್ಯ ನಾಯಕರ ಜತೆ ನಡ್ಡಾ ಸಭೆ: ಬಿಎಸ್‌ವೈ, ವಿಜಯೇಂದ್ರ ಅಶೋಕ್ ಭಾಗಿ | ಕೆಲವರ ಬದಲಾವಣೆಗೆ ರಾಜ್ಯ ನಾಯಕರ ವಿರೋಧ

## ಶಿವರಾತ್ರಿ ಹಬ್ಬದ ಬಳಿಕ ರಾಜ್ಯ ಬಿಜೆಪಿಯ ಅಭ್ಯರ್ಥಿಗಳ ಪಟ್ಟಿ

ವಿಶ್ವವಾಣಿ ಸುದ್ದಿಮನೆ

**ಬೆಂಗಳೂರು:** ಲೋಕಸಭಾ ಚುನಾವಣೆಗೆ ದೇಶಾದ್ಯಂತ 195 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಎಲ್ಲರಿಗಿಂತಲೂ ಮೊದಲೇ ಪ್ರಕಟಿಸಿ ಕಣಕ್ಕಿಳಿದಿರುವ ಬಿಜೆಪಿಯಲ್ಲೀಗ ರಾಜ್ಯದ 28 ಕ್ಷೇತ್ರಗಳ ಅಭ್ಯರ್ಥಿ ಆಯ್ಕೆಯ ಕಸರತ್ತು ಆರಂಭವಾಗಿದೆ. ಆದರೆ, ರಾಜ್ಯದಿಂದ ಸ್ಪರ್ಧಿಸುವ ಬಿಜೆಪಿ ಹುರಿಯಾಳುಗಳು ಯಾರೆನ್ನುವ ಕುತೂಹಲಕ್ಕೆ ಉತ್ತರ ಮಾತ್ರ ಶಿವರಾತ್ರಿ ಬಳಿಕವೇ ಸಿಗಲಿದೆ.

ಎರಡನೇ ಹಂತದ ಟಿಕೆಟ್ ಘೋಷಣೆಗೆ ಸಂಬಂಧಿಸಿದಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಕರ್ನಾಟಕ ಸೇರಿದಂತೆ 10 ರಾಜ್ಯಗಳ ಮುಖಂಡರೊಂದಿಗೆ ಬುಧವಾಖ ಸಭೆ ನಡೆಸಿದ್ದಾರೆ. ಸಭೆಯಲ್ಲಿ ರಾಜ್ಯ ನಾಯಕರ ಅಭಿಪ್ರಾಯ ಸಂಗ್ರಹಿಸಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಅಂತಿಮ ಸುತ್ತಿನ ಸಭೆ ನಡೆಸಿ, ಎರಡನೇ ಹಂತದ ಟಿಕೆಟ್‌ಗಳನ್ನು ಘೋಷಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ, ರಾಜ್ಯದ 28 ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನಡ್ಡಾ ಜತೆ ಚರ್ಚಿಸಲಾಗಿದೆ. ವಯಸ್ಸಿನ ಕಾರಣಕ್ಕೆ ಎಂಟಕ್ಕೂ ಹೆಚ್ಚು ಕ್ಷೇತ್ರದಲ್ಲಿ ಹಾಲಿ ಸಂಸದರ ಬದಲಿಗೆ ಹೊಸಬರಿಗೆ ಅವಕಾಶ ನೀಡಬೇಕು ಎನ್ನುವ ಬಗ್ಗೆ ಚರ್ಚೆ ನಡೆಸಲಾಗಿದೆ. ಇದರೊಂದಿಗೆ ಆಡಳಿತ ವಿರೋಧಿ ಅಲೆಯಿರುವ ಹಲವು ಕ್ಷೇತ್ರಗದಲ್ಲಿ ಅಭ್ಯರ್ಥಿಗಳನ್ನು ಬದಲಿಸಬೇಕು ಎನ್ನುವ ಬಗ್ಗೆ ಚರ್ಚೆ ನಡೆದಿದ್ದರೂ, ಅಭ್ಯರ್ಥಿ ಬದಲಾವಣೆಯಿಂದ ಆಗಬಹುದಾದ ಸಮಸ್ಯೆಯಿಂದ ಬದಲಾವಣೆಗೆ ರಾಜ್ಯನಾಯಕರು ಹಿಂದೇಟು ಹಾಕುತ್ತಿದ್ದಾರೆ ಎಂದು ತಿಳಿದುಬಂದಿದೆ. → 8

### ಹೊಸಬರಿಗೆ ಮಣೆ: ಸಂಘದ ಶಿಫಾರಸು

ರಾಜ್ಯದ 28 ಕ್ಷೇತ್ರಗಳಲ್ಲಿ ಕನಿಷ್ಠ 15-18 ಕ್ಷೇತ್ರಗಳಲ್ಲಿ ಹೊಸಬರಿಗೆ ಅವಕಾಶ ನೀಡಬೇಕು ಎನ್ನುವ ವರದಿಯನ್ನು ಆರ್‌ಎಸ್‌ಎಸ್ ರವಾನಿಸಿದೆ . ಸತತವಾಗಿ ಆಯ್ಕೆಯಾಗುತ್ತಿರುವ ಹಲವು ಸಂಸದರ ವಿರುದ್ಧ ಆಡಳಿತ ವಿರೋಧಿ ಅಲೆಯಿದೆ. ಆದ್ದರಿಂದ ಈ ಎಲ್ಲರನ್ನು ಬದಲಾಯಿಸಿ, ಹೊಸಬರಿಗೆ ಅವಕಾಶ ನೀಡಬೇಕು ಎಂದು ಸ್ಪಷ್ಟವಾಗಿ ಹೇಳಿದೆ. ಆದರೆ ಈ ಪ್ರಮಾಣದಲ್ಲಿ ಬದಲಾವಣೆ ಮಾಡುವುದಕ್ಕೆ ಯಡಿಯೂರಪ್ಪ ವಿರೋಧವ್ಯಕ್ತಪಡಿಸಿದ್ದಾರೆ.

---

ಆದೇಶ ರದ್ದುಪಡಿಸಿದ ಹೈಕೋರ್ಟ್

## 5ರಿಂದ 11ನೇ ತರಗತಿಗೆ ಬೋರ್ಡ್ ಪರೀಕ್ಷೆ ಇಲ್ಲ

**ಬೆಂಗಳೂರು:** ರಾಜ್ಯ ಪಠ್ಯಕ್ರಮವಿರುವ ಶಾಲೆಗಳ 5, 8, 9 ಹಾಗೂ 11ನೇ ತರಗತಿಗೆ ರಾಜ್ಯ ಮಟ್ಟದ ಬೋರ್ಡ್ ಪರೀಕ್ಷೆ ನಡೆಸುವ ಸಂಬಂಧ ರಾಜ್ಯ ಸರಕಾರ ಹೊರಡಿಸಿದ್ದ ಸುತ್ತೋಲೆಯನ್ನು ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ. ರಾಜ್ಯ ಪಠ್ಯಕ್ರಮದ ಶಾಲೆಗಳ ಈ 4 ತರಗತಿಗಳ ವಿದ್ಯಾರ್ಥಿಗಳಿಗೆ ಶಾಲಾ ಮಟ್ಟದ ಮೌಲ್ಯಮಾಪನದ ಬದಲಾಗಿ ರಾಜ್ಯ ಮಟ್ಟದ ಮಂಡಳಿ (ಬೋರ್ಡ್) ಪರೀಕ್ಷೆ ನಡೆಸಲು ತೀರ್ಮಾನಿಸಿ ಈ ಹಿಂದೆ ಸುತ್ತೋಲೆ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಅನುದಾನರಹಿತ ಖಾಸಗಿ ಶಾಲೆಗಳ ಒಕ್ಕೂಟ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ರವಿ ಹೊಸಮನಿ ಅವರಿದ್ದ ಪೀಠ ಬುಧವಾರ ತೀರ್ಪು ಪ್ರಕಟಿಸಿತು.

7.8 ಕೋಟಿ ರು.ಗಳ ಬಿಡುಗಡೆ

## ರಾಜ್ಯ 137 ಧಾರ್ಮಿಕ ಸಂಸ್ಥೆಗಳಿಗೆ ಅನುದಾನ

**ಬೆಂಗಳೂರು:** ರಾಜ್ಯದ ಮುಜರಾಯಿ ದೇವಾಲಯಗಳ ಬಹುತಿಂಗಳ ಬೇಡಿಕೆಯಾಗಿದ್ದ, ಅನುದಾನ ವನ್ನು ಮುಜರಾಯಿ ಇಲಾಖೆ ಬುಧ ವಾರ ಬಿಡುಗಡೆ ಗೊಳಿಸಿ ಆದೇಶ ಹೊರಡಿಸಿದೆ.

ರಾಜ್ಯದ 137 ಧಾರ್ಮಿಕ ಸಂಸ್ಥೆಗಳಿಗೆ 7.8 ಕೋಟಿ ರು.ಗಳನ್ನು ಸರಕಾರ ಬಿಡುಗಡೆ ಗೊಳಿಸಿದ್ದು, ಈ ಅನುದಾನ ಬಳಸಿ ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯ ಹಾಗೂ ವಸತಿ ವ್ಯವಸ್ಥೆಗೆ ಅವಕಾಶ ನೀಡಬೇಕು ಎಂದು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ಆಯುಕ್ತರಿಗೆ ಷರತ್ತು ಹಾಕಿ ಅನುದಾನ ಬಿಡುಗಡೆಗೊಳಿಸಲಾಗಿದೆ.

ಪ್ರಸಕ್ತ ಆರ್ಥಿಕ ಸಾಲಿನಲ್ಲಿ ದುರಸ್ತಿ, ಜೀರ್ಣೋದ್ಧಾರ, ನಿರ್ಮಾಣ ಯೋಜನೆಯಲ್ಲಿ ನಾನಾ ಜಿಲ್ಲೆಗಳ ದೇವಸ್ಥಾನ, ಮಠ, ಸಂಘ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವಂತೆ ಒತ್ತಡ ಕೇಳಿಬಂದಿತ್ತು. ಅನುದಾನ ಬಿಡುಗಡೆ ಮಾಡಿರುವ ಸಂಸ್ಥೆಗಳು ನಿಯಮಾನುಸಾರ ನೀಡಬಹು ದಾದ ಮೊತ್ತವನ್ನು ಮುಂಗಡ ರಸೀದಿ ಪಡೆದು ಬಿಲ್ ಪಾವತಿಸಬೇಕು.

ಹಾರೋಹಳ್ಳಿ, ನರಸಾಪುರ, ಬೊಮ್ಮಸಂದ್ರಕ್ಕೆ

## ಕರ್ನಾಟಕದಲ್ಲಿ ಮೂರು ಹೊಸ ಇಎಸ್‌ಐ ಆಸ್ಪತ್ರೆ

**ದೆಹಲಿ:** ಕರ್ನಾಟಕ ಸೇರಿದಂತೆ ದೇಶದ ನಾಲ್ಕು ರಾಜ್ಯಗಳಲ್ಲಿ ₹1,128.21 ಕೋಟಿ ವೆಚ್ಚದಡಿ ಏಳು ಇಎಸ್‌ಐ ಆಸ್ಪತ್ರೆಗಳ ನಿರ್ಮಾಣಕ್ಕೆ ಕಾರ್ಮಿಕರ ರಾಜ್ಯ ವಿಮಾ ನಿಗಮವು (ಇಎಸ್‌ಐಸಿ) ಕೇಂದ್ರ ಕಾರ್ಮಿಕ ಕಾರ್ಯದರ್ಶಿ ಸುಮಿತಾ ದಾವ್ರಾ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಅನುಮೋ ದನೆ ನೀಡಿದೆ. ಕರ್ನಾಟಕದ ಹಾರೋಹಳ್ಳಿ, ನರಸಾಪುರ ಹಾಗೂ ಬೊಮ್ಮಸಂದ್ರದಲ್ಲಿ ಆಸ್ಪತ್ರೆಗಳನ್ನು ನಿರ್ಮಿಸಲಾಗುತ್ತದೆ. ಈ ಹೊಸ ಆಸ್ಪತ್ರೆಗಳ ನಿರ್ಮಾಣದಿಂದ ರೋಗಿಗಳ ಸೇವೆಗೆ ಹೆಚ್ಚುವರಿಯಾಗಿ 800 ಹಾಸಿಗೆಗಳು ದೊರೆಯಲಿವೆ ಎಂದು ಸಭೆಯ ಬಳಿಕ ತಿಳಿಸಲಾಗಿದೆ.

### ಫನ್‌ತರಂಗ

– ರಘುಪತಿ ಶೃಂಗೇರಿ –

ವಿಶ್ವಾದ್ಯಂತ ಸುಮಾರು 1 ಗಂಟೆಗಳ ಕಾಲ ಫೇಸ್ಬುಕ್, ಇನ್ಸ್ಟಾಗ್ರಾಮ್ ಸ್ಥಗಿತ




## ಬಾಂಬರ್ ಸುಳಿವು ನೀಡಿದರೆ 10 ಲಕ್ಷ ರು.ಗಳ ಬಹುಮಾನ

**ಬೆಂಗಳೂರು:** ನಗರದ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ ಪ್ರಕರಣದ ವಿಚಾರಣೆ ತೀವ್ರಗೊಳಿಸಿರುವ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಬಾಂಬರ್‌ನ ಫೋಟೋ ಬಿಡುಗಡೆ ಮಾಡಿದ್ದು ಸುಳಿವು ನೀಡಿದವರಿಗೆ 10 ಲಕ್ಷ ರು. ಘೋಷಿಸಿದೆ. ಎನ್‌ಐಎ ತನಿಖೆಗೂ ಮುನ್ನ ಸಿಸಿಬಿ ನಡೆಸಿದ್ದ ತನಿಖೆ ವೇಳೆ ಬಾಂಬರ್ ಮಾಸ್ಕ್ ಹಾಕಿ ಕೊಳ್ಳದ ಫೋಟೋ ಪತ್ತೆಯಾಗಿತ್ತು. ಇದೇ ಫೋಟೋವನ್ನು ಎನ್‌ಐಎ ಬಿಡುಗಡೆ ಮಾಡಿದೆ. ಎನ್‌ಐಎ 5 ಮಾರ್ಚ್ 2024ರಂದು ರಾಮೇಶ್ವರಂ ಕೆಫೆಗೆ ಭೇಟಿ ನೀಡಿ ತನಿಖೆ ಆರಂಭಿಸಿತ್ತು. ಮಂಗಳವಾರ ತನಿಖೆ ನಡೆಸಿದ ಅಧಿಕಾರಿಗಳು ಕ್ಯಾಶ್ ಕೌಂಟರ್, ಸಿಸಿ ಕ್ಯಾಮರಾ ಪರಿಶೀಲನೆ ನಡೆಸಿದ್ದಾರೆ.




**080 - 29510900, 894241100**
ಸಂಖ್ಯೆಗೆ ಕರೆಮಾಡಿ ಮಾಹಿತಿ ನೀಡಿ

ಈ ವರ್ಷ ಇನ್ನಷ್ಟು ಕಾಡಲಿದೆ ಬೇಸಿಗೆ

## ರಾಜಧಾನಿಯಲ್ಲಿ ಗರಿಷ್ಠ 36 ಡಿಗ್ರಿಯ ತಾಪಮಾನ

**ಬೆಂಗಳೂರು:** ಉದ್ಯಾನ ನಗರಿಯಲ್ಲಿ 5 ವರ್ಷಗಳ ಬಳಿಕ ಮಂಗಳವಾರ ಗರಿಷ್ಠ ತಾಪಮಾನ 36 ಡಿಗ್ರಿ ಸೆಂಟಿಗ್ರೇಡ್ ದಾಖಲಾಗಿದೆ. ಕಳೆದ ವರ್ಷಗಳ ಈ ದಿನಗಳಿಗೆ ಹೋಲಿಸಿದರೆ, ಈ ವರ್ಷ ಗರಿಷ್ಠ ತಾಪಮಾನ ಕಂಡುಬಂದಿದೆ. ಚಳಿಗಾಲದ ಅಂತ್ಯದ ನಡುವೆಯೇ ರಾಜ್ಯಕ್ಕೆ ಬೇಸಿಗೆ ಝಳ ಕಾಲಿಟ್ಟಿದ್ದು, ಬೆಂಗಳೂರು ನಾಲ್ಕು ವರ್ಷದ ದಾಖಲೆಯನ್ನು ಮುರಿದಿದೆ. 2018ರ ಬಳಿಕ ದಾಖಲೆಯ 36 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಮಂಗಳವಾರ ದಾಖಲಾಗಿದೆ.

ಕೇಂದ್ರ ಜಲ ಆಯೋಗದಿಂದ ಹತ್ತು ವರ್ಷಗಳ ಒಡಂಬಡಿಕೆ ಜಾರಿ

## ಅಣೆಕಟ್ಟುಗಳ ಸುರಕ್ಷತೆಗೆ ಐಐಎಸ್ಸಿ ಜತೆ ಒಪ್ಪಂದ

**ದೆಹಲಿ:** ಅಣೆಕಟ್ಟುಗಳ ಸುರಕ್ಷತೆಗೆ ಕೆಲಸ ಮಾಡುವ ಕೇಂದ್ರವೊಂದನ್ನು ಆರಂಭಿ ಸಲು (ಅಣೆಕಟ್ಟುಗಳ ಉತ್ಕೃಷ್ಟತೆಗಾಗಿನ ಅಂತಾರಾಷ್ಟ್ರೀಯ ಕೇಂದ್ರ – ಐಸಿಇಡಿ) ಕೇಂದ್ರ ಜಲ ಆಯೋಗವು (ಸಿಡಬ್ಲ್ಯುಸಿ) ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಜತೆ ಒಪ್ಪಂದಕ್ಕೆ ಸಹಿ ಹಾಕಿದೆ. ಒಪ್ಪಂದವು ಹತ್ತು



ವರ್ಷಗಳ ಅವಧಿಗೆ ಜಾರಿಯಲ್ಲಿ ಇರುತ್ತದೆ. ರಾಷ್ಟ್ರ ಮಟ್ಟದಲ್ಲಿ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಣೆಕಟ್ಟುಗಳ ರಕ್ಷಣೆಯ ವಿಚಾರದಲ್ಲಿ ಎದುರಾಗುವ ಸವಾಲುಗಳಿಗೆ ಐಸಿಇಡಿ ಕೇಂದ್ರವು ಪರಿಹಾರ ಹುಡುಕಲು ನೆರವಾಗಲಿದೆ ಎಂದು ಜಲ ಶಕ್ತಿ ಸಚಿವಾಲಯದ ಪ್ರಕಟಣೆ ತಿಳಿಸಿದೆ.



ಅಥಣಿ ತಾಲೂಕಿನ ಕೊಟ್ಟಲಗಿ ಗ್ರಾಮದಲ್ಲಿ ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ಬುಧವಾರ, ಶಂಕು ಸ್ಥಾಪನೆ ನೆರವೇರಿಸಿದರು. ಸಚಿವರಾದ ಎಂ ಬಿ ಪಾಟೀಲ, ಸತೀಶ್ ಜಾರಕೀಹೊಳಿ, ಲಕ್ಷ್ಮೀ ಹೆಬ್ಬಾಳ್ಕರ್, ಶಾಸಕ ಲಕ್ಷ್ಮಣ್ ಸವದಿ ಇದ್ದರು.

## ನೆಲಮಂಗಲ ಖಾಸಗಿ ಆಸ್ಪತ್ರೆಯಲ್ಲಿ 74 ಗರ್ಭಪಾತ: ಎಫ್‌ಐಆರ್ ದಾಖಲು


# ಭ್ರೂಣ ಹತ್ಯೆಯ ಮತ್ತೊಂದು ಪ್ರಕರಣ

**ಬೆಂಗಳೂರು:** ರಾಜ್ಯದಲ್ಲಿ ಭ್ರೂಣಹತ್ಯೆಯ ಸರಣಿ ಪ್ರಕರಣಗಳು ಆತಂಕ ಹುಟ್ಟಿಸಿದ್ದ ಬೆನ್ನಲ್ಲೇ ಇಂಥದ್ದೇ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ.

ನೆಲಮಂಗಲದ ಖಾಸಗಿ ಆಸ್ಪತ್ರೆಯೊಂದರಲ್ಲಿ 74 ಭ್ರೂಣ ಹತ್ಯೆ ಮಾಡಿರುವ ಆರೋಪದ ಸಂಬಂಧ ನೆಲಮಂಗಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ದೂರು ದಾಖಲಾಗುತ್ತಿದ್ದಂತೆ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಎಲ್ಲ ಪರಾರಿಯಾಗಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆಸರೆ ಆಸ್ಪತ್ರೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ 74 ಭ್ರೂಣಗಳ ಹತ್ಯೆ ನಡೆಸಲಾಗಿದೆ ಎಂದು ಸ್ವತಃ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಸ್ಪತ್ರೆಗೆ ನೋಟಿಸ್ ನೀಡಿದೆ. ಆಸ್ಪತ್ರೆಯ ವೈದ್ಯ ಡಾ. ರವಿಕುಮಾರ್ ಅವರೇ ಆರೋಪಿಯಾಗಿದ್ದು, ಇತರ ವೈದ್ಯರು ಮತ್ತು ಸಿಬ್ಬಂದಿ ಇದರಲ್ಲಿ ಶಾಮೀಲಾಗಿ ಹೆಣ್ಣು ಭ್ರೂಣ ಹತ್ಯೆಯಲ್ಲಿ ಶಾಮೀಲಾಗಿದ್ದಾರೆ ಎಂದು ಆರೋಪಿಸಲಾಗಿದೆ.

2021 ರಿಂದ ಇಲ್ಲಿಯವರೆಗೆ 74 ಗರ್ಭಪಾತದಲ್ಲಿ 32 ಪ್ರಕರಣಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಇದರಿಂದ ಈ ಬಗ್ಗೆ ಮಾಹಿತಿ ಕೇಳಲಾಗಿದೆ. ಈ ಸಂಬಂಧ ಪೊಲೀಸರು ಆಸ್ಪತ್ರೆಗೆ ನೋಟಿಸ್ ನೀಡಿದ್ದು ಸಿಸಿಟಿವಿ ದೃಶ್ಯ ಹಾಗೂ ಶಸ್ತ್ರ ಚಿಕಿತ್ಸೆಗಳ ಅಲ್ಟ್ರಾ ಸೌಂಡ್ ಬಗ್ಗೆ ಮಾಹಿತಿ ನೀಡುವಂತೆ ಅಧಿಕಾರಿ ಮಂಜುನಾಥ್ ನೀಡಿರುವ ನೋಟಿಸ್‌ನಲ್ಲಿ ಸೂಚಿಸಲಾಗಿದೆ. ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 312, 313, 315, 316ರಡಿ ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಲಾಗಿದೆ.




### ಆರೋಪಗಳೇನು?

- ಆಸ್ಪತ್ರೆಯಲ್ಲಿ ಭ್ರೂಣಹತ್ಯೆ ನಿಷೇಧ ಕಾಯಿದೆಯ ಸ್ಪಷ್ಟ ಉಲ್ಲಂಘನೆ
- ನೋಂದಣಿ ಮಾಡದ ಕೆಪಿಎಂಇ ಪರವಾನಗಿ ಮೇಲೆ ಅನಧಿಕೃತ ಭ್ರೂಣಹತ್ಯೆ
- ಜಿಲ್ಲಾ ಆರೋಗ್ಯ ಅಧಿಕಾರಿ ಪರಿಶೀಲಿಸುವಾಗ ಒದಗಿಸಿದ ಸೂಕ್ತ ಮಾಹಿತಿ
- ಎಂಟಿಪಿ (ಅಬಾರ್ಷನ್) 60, 32 ಅಡಿ ದಾಖಲೆ ಒದಗಿಸಿಲ್ಲ. ಸ್ಕ್ಯಾನಿಂಗ್ ಮಿಷನ್ ಇಲ್ಲದೆ ಆಸ್ಪತ್ರೆ ನಡೆಸಲಾಗುತ್ತಿದೆ
- ಸೂಕ್ತ ದಾಖಲೆ ಒದಗಿಸುವಲ್ಲಿ ಆಸ್ಪತ್ರೆ ಸಿಬ್ಬಂದಿ ವಿಫಲವಾಗಿದ್ದಾರೆ.